<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಡಿಬಂಡೆ</u>

**<u>ಸಿ.ಸಿ. ಸಂಖ್ಯೆಃ 262/2020</u>**

**<u>ಸಿ ಡಬ್ಲ್ಯೂಃ 3 ಪಿ ಡಬ್ಲ್ಯೂಃ 2</u>**

| | | |
|---|---|---|
| ಸಾಕ್ಷಿದಾರರ ಹೆಸರು | :: | ಶ್ರೀನಿವಾಸ್ ಯಾದವ್ |
| ತಂದೆಯ ಹೆಸರು | :: | ಲಕ್ಷ್ಮೀಪತಿ |
| ವಯಸ್ಸು | :: | 38 ವರ್ಷ |
| ಉದ್ಯೋಗ | :: | ವ್ಯಾಪಾರ |
| ವಾಸ ಸ್ಥಳ | :: | ಗುಡಿಬಂಡೆ |

ದಿನಾಂಕಃ 03-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

*<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ</u>*

ಚಾಸಾ -2 ಮತ್ತು 4 ಪರಿಚಯ ನನಗೆ ಇರುತ್ತದೆ.

ಆರೋಪಿತರ ಪರಿಚಯ ನನಗೆ ಇರುತ್ತದೆ .

ಈ ಕೇಸಿನ ವಿಚಾರ ನನಗೆ ಏನು ಗೊತ್ತಿಲ್ಲ.

ನಾನು ಯಾವುದೇ ಗಲಾಟೆಯ ಪ್ರತ್ಯಕ್ಷ ದರ್ಶಿಯಲ್ಲ.

ನಾನು ಯಾವುದೇ ಗಲಾಟೆಯನ್ನು ಬಿಡಿಸಿರುವುದಿಲ್ಲ.

ನಾನು ಈ ಕೇಸಿನ ವಿಚಾರವಾಗಿ ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

*(ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶವನ್ನು ಕೋರಿರುತ್ತಾರೆ, ಆದ್ದರಿಂದ ಪಾಟೀ ಸವಾಲಿಗೆ ಅನುಮತಿಸಲಾಯಿತು. )*

*<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ</u>*

ದಿನಾಂಕ 08-01-2020 ರಂದು ಬೆಃ 05-45 ಗಂಟೆ ಸಮಯದಲ್ಲಿ ನಮ್ಮ ಅಂಗಡಿಯ ಪಕ್ಕದ ಚಾಸಾ-2 ರವರ ಹೋಟೆಲ್ ನಲ್ಲಿ ನಾನು ಗಲಾಟೆ ಶಬ್ದ ಕೇಳಿ ಅಲ್ಲಿಗೆ ಹೋದೆ ಎಂದರೆ ಸರಿಯಲ್ಲ. ಅಲ್ಲಿಗೆ ಹೋದಾಗ ಆರೋಪಿತರು ಚಾಸಾ -2 ರವರ ಹೋಟೆಲ್ ಗೆ ಅಕ್ರಮ ಪ್ರವೇಶ ಮಾಡಿನಾವು ಈ ದಿನ ಭಾರತ್ ಬಂದ್ ಮಾಡುತ್ತಿದ್ದು ನೀನು ಹೋಟೆಲ್ ತೆಗೆದು ವ್ಯಾಪಾರ ಮಾಡುತ್ತೀಯ ಎಂದು

ಹಾಗೂ ನಾವು ಒಂದು ವಾರದಿಂದ ಹೇಳುತ್ತಿದ್ದರೂ ನಿನಗೆ ಎಷ್ಟು ಧೈರ್ಯ ಎಂದು, ಚಾಸಾ-2 ಅವಾಚ್ಯ ಶಬ್ದಗಳಿಂದ ಬೈದರು ಎಂದರೆ ಸರಿಯಲ್ಲ. ಹೋಟೆಲ್ ಮುಚ್ಚದಿದ್ದರೆ ಚಾಸಾ-2 ರವರನ್ನು ಪ್ರಾಣ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ -2 ಟೀ ಮಾಡುತ್ತಿದ್ದಾಗ ಚಾಸಾ-2 ಅಲುಗಾಡದಂತೆ ಅವರ ಕೈ ಬಿಗಿಯಾಗಿ ಇಡಿದುಕೊಂಡಿದ್ದು ಆ ಸಮಯದಲ್ಲಿ ನಾನು ಹೋಗಿ ಸಮಾಧಾನ ಮಾಡಿ ಅವರನ್ನು ಕಳುಹಿಸಿದರು ಎಂದರೆ ಸರಿಯಲ್ಲ. ಈ ಬಗ್ಗೆ ಪೋಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ತನ್ನ ಹೇಳಿಕೆಯ ಭಾಗವನ್ನು ನಿಪಿ-2 ಎಂದು ಗುರುತಿಸಲಾಯಿತು .

ನಾನು ಮತ್ತು ಆರೋಪಿಗಳು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ನಾನು ಮತ್ತು ಆರೋಪಿಗಳಿಗೆ ಸಹಾಯ ಮಾಡೂ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀ ಸವಾಲುಃಃ ಆರೋಪಿತರ ಪರ ವಕೀಲರು ಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ. ಆದ ಕಾರಣ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದು ಕೊಳ್ಳಲಾಯಿತು.

ಮರುವಿಚಾರಣೆಃಃ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು)

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,

ಗುಡಿಬಂಡೆ,